ಚಾಸಾ-1

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5050/2024 ಪ್ರಾಸಾ-1
ಚಾಸಾ-2

ದಿನಾಂಕ: 03-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಗಂಗಮ್ಮ |
| **ತಂದೆಯ / ಗಂಡನ ಹೆಸರು** | ಬಾಬಣ್ಣ |
| **ವಯಸ್ಸು** | 80 |
| **ಉದ್ಯೋಗ** | ಗೃಹಿಣಿ |
| **ವಾಸಸ್ಥಳ** | ಕೆ. ರಾಮಪುರಂ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಆರೋಪಿ ನನ್ನ ಮಗನಾಗಬೇಕು. ಮೃತ ಆದಿಲಕ್ಷಮ್ಮ ನನ್ನ ಸೊಸೆಯಾಗಬೇಕು. ಆದಿಲಕ್ಷಮ್ಮ ಸುಮಾರು ಒಂದು ವರ್ಷದ ಹಿಂದೆ ತೀರಿಕೊಂಡಿರುತ್ತಾಳೆ. ಮೃತ ಆದಿಲಕ್ಷಮ್ಮ ಹೇಗೆ ಮೃತಪಟ್ಟಿರುತ್ತಾರೆ ಮತ್ತು ಅವರ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ಆರೋಪಿಗೆ ಕುಡಿಯುವ ಅಭ್ಯಾಸ ಇತ್ತು ಎನ್ನುವುದು ನಿಜ. ಆರೋಪಿ ಯಾವಾಗಲೂ ಮೃತ ಆದಿಲಕ್ಷಮ್ಮ ನಿಗೆ ಕುಡಿಯಲು ದುಡ್ಡು ಕೊಡು ಎಂದು ಪೀಡಿಸುತ್ತಿದ್ದ ಎಂದರೆ ಸರಿಯಲ್ಲ. ದಿ. 12.08.2024 ರಂದು ಬೆಳಿಗ್ಗೆ 12-00 ಗಂಟೆ ಸುಮಾರಿಗೆ ನಾನು ಮನೆಯ ಮುಂದೆ ವರಂಡದಲ್ಲಿ ಕೂತಿದ್ದಾಗ ನನ್ನ ಸೊಸೆ ಆದಿಲಕ್ಷಮ್ಮ ಮನೆಯಲ್ಲಿ ಟಿ.ವಿ ನೋಡಿಕೊಂಡು ಬಟ್ಟೆ

**ಚಾಸಾ-1**

ಮಡಿಚುತ್ತಿದ್ದರು ಆಗ ಆರೋಪಿ ಆದಿಲಕ್ಷ್ಮ್ಮ ನಿಗೆ ಕುಡಿಯಲು ದುಡ್ಡು ಕೊಡಲು ಕೇಳಿದ್ದು ನನ್ನ ಸೊಸೆ ಹಣ ಕೊಡದೇ ಇದುದ್ದಕ್ಕೆ ಅವಳ ಜೊತೆ ಜಗಳ ಮಾಡುತ್ತಿದ್ದ ಸುಮಾರು 12-00 ಗಂಟೆಗೆ ಒಣಕೆ ತೆಗೆದುಕೊಂಡು ನನ್ನ ಸೊಸೆಯ ತಲೆಗೆ ಹೊಡೆದಿದ್ದು ಆಗ ಆದಿಲಕ್ಷ್ಮ್ಮ ಅರಿಚಿಕೊಳ್ಳುತಿದ್ದ ಶಬ್ದ ಕೇಳಿ ನಾನು ಒಳಗೆ ಹೋಗಿ ನೋಡಲಾಗಿ ನನ್ನ ಸೊಸೆ ಕೆಳಗೆ ಬಿದಿದ್ದು ತಲೆಯಲ್ಲಿ ರಕ್ತ ಬರುತ್ತಿದ್ದನ್ನು ನೋಡಿ ನಾನು ಜೊರಾಗಿ ಕಿರುಚಿಕೊಂಡಾಗ ನನ್ನ ಮಗ ಮನೆಯಿಂದ ಹೊರಟು ಹೋದನು ನಂತರ ನನ್ನ ಚಾಸಾ-1 ಮತ್ತು 3 ರವರು ಆಂಬುಲೆಯನ್ಸ್ ನಲ್ಲಿ ಪಾವಗಡ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ನಂತರ ನಿಮಾನ್ಸ್ ಆಸ್ಪತ್ರೆಯಲ್ಲಿ ನನ್ನ ಸೊಸೆ ಮರಣಹೊಂದಿರುತ್ತಾರೆಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಸದರಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಓದಿ ಹೇಳಿದ ಹೇಳಿಕೆಯನ್ನು ಸಾಕ್ಷಿ ಅಲ್ಲಗೆಳೆದಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನನ್ನ ಸೊಸೆ ಸಾವಿಗೆ ನನ್ನ ಮಗನೇ ಕಾರಣ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ-ಶ್ರೀ ಬಿ.ಬಿ.ಎಂ. ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**